| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No.**

ಸಾಕ್ಷಿದಾರನ ಹೆಸರು ಃ ಶೇಖ್ ಹಬೀಬ್ ಪಿ.ಡಬ್ಲ್ಯೂಃ 9

ತಂದೆಯ ಹೆಸರುಃ ಶೇಖ್ ಮಹಮ್ಮದ್ ಸಿ.ಡಬ್ಲ್ಯೂಃ 7

ಪ್ರಾಯ ಃ 52 ವರ್ಷ

ಉದ್ಯೋಗ ಃ ರಿಕ್ಷಾ ಚಾಲಕ

ವಾಸ ಃ ತೆಳ್ಳಾರು

ದಿನಾಂಕ 10-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಚಾಸಾ-4 ರವರ ಪರಿಚಯ ಇಲ್ಲ.

ಸುಮಾರು 2 ವರ್ಷದ ಹಿಂದೆ ನಾನು ಕೆಲಸ ನಿಮಿತ್ತ ಠಾಣೆಗೆ ಹೋಗಿದ್ದಾಗ ಪೊಲೀಸರು ದಾಖಲೆಗೆ ಸಹಿ ಮಾಡುವಂತೆ ತಿಳಿಸಿರುತ್ತಾರೆ. ಅದರಂತೆ ಸಹಿ ಮಾಡಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿಯು ದಿಃ11.10.2022 ರ ಸ್ವತ್ತು ಸ್ವಾಧೀನತಾ ಮಹಜರು ಹಾಗೂ ದಿಃ19.10.2022 ರ ಸ್ವತ್ತು ಬಿಡುಗಡೆ ಮಹಜರಿನಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರುಗಳನ್ನು ಈಗಾಗಲೇ ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ-13(ಬಿ) ಮತ್ತು 14(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-15 ಮತ್ತು 16 ಭಾವಚಿತ್ರ ನೋಡಿ ಗುರುತಿಸಿರುತ್ತಾರೆ. ಯಾವ ವಿಚಾರಕ್ಕಾಗಿ ಭಾವಚಿತ್ರ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ

ತಕ್ಷೀರಿಗೆ ಸಂಬಂಧಿಸಿದ ಟಿಪ್ಪರ್ ಮತ್ತು ಹಿತಾಚಿ ಯನ್ನು ಸ್ವಾಧೀನಪಡಿಸುವ ಹಾಗೂ ಸದ್ರಿ ವಾಹನಗಳನ್ನು ಬಿಡುಗಡೆಗೊಳಿಸುವ ಸಮಯ ನಾನು ಪಂಚನಾಗಿ ಹಾಜರಿದ್ದು ಸದ್ರಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ : ಶ್ರೀ ಎನ್ ಎಂ ಜೆ ವಕೀಲರುಃ

ನಾನು ನಿಪಿ-13(ಬಿ) ಮತ್ತು 14(ಬಿ) ಸಹಿ ಮಾಡುವಾಗ ಅದರಲ್ಲಿ ಏನೂ ಬರೆದಿತ್ತು ಎಂದು ಗಮನಿಸಿರುವುದಿಲ್ಲ. ಪೋಲಿಸ್ ಠಾಣೆಗೆ ಆಗಾಗ ಹೋಗುತ್ತಿತ್ತು ಪೋಲಿಸರಿ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Accused is present. CW2 and 4 are present and examined as PW2 and 3 and got marked Ex.P 12 and 2(b), 3(b), 12(a).

Learned APP filed memo, praying to issue s/s to the CW 3, 14, 18 and 19 . As the eye witness and victim witness CW 2 and 4 have completly turned hostile to the case of prosecution and both the parties submitted the matter is settled b/w the them. Hence no purpose will be served by issuance of summons to CW 3, 14, 18, 19. Who are hearsay eye witness Hence by rejecting the prayer of learned APP. Evidence of CW 3, 14, 18, 19 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for Arguments.

Call on : 20.12.2021

II Addl. Civil Judge & JMFC.
Karkala (c/c)